ಇಲ್ಲಂದ್ರ ಇಂಥಾ ಘಟನಾಗಳಿಗೆ ಕೊನಿ ಎಂಬೂದ ಇರಾಂಗಿಲ್ಲ. ಆಯ್ತು, ಸುಭಾಷ ಅಂಥಾ ಒಂದ ಒಳ್ಳೆಯ ತೀರ್ಮಾನ. ಈ ಘಟನೆಯಿಂದ ಬರತೈತಂತ ನಂಬಿಕೆ ಐತಿ. ನಾ ಬರಲಾ ಹಂಗಾರ..?' ಎಂದು ಅಲ್ಲಿಂದ ಮನೆಯತ್ತ ನಡೆದ ಜಗದೀಶ.

*

ದಿನಪೂರ್ತಿ ಜಗದೀಶನ ತಲೆಯಲ್ಲಿ, ಕೊಲೆಯಾದ ಆ ವಿದ್ಯಾರ್ಥಿನಿ ಯಾರೋ..? ಅದಾವ ಘಳಿಗೆಯಲ್ಲಿ ಈ ಊರಿಗೆ ಬಂದಿದ್ದಳೋ..? ಎಂಥ ದಾರುಣ ಸಾವು ಕಾಣಬೇಕಾಯಿತಲ್ಲ ಎಂದು ಹಳಹಳಿಸಿದ. ಅವಳನ್ನು ಈ ರೀತಿಯಾಗಿ ಬರ್ಬರ ಹತ್ಯೆ ಮಾಡಿದ ಆ ಯುವಕನಾರೋ, ಅದೇನೋ ಕಾರಣವೋ ಒಂದೂ ತಿಳಿಯದೆ ಆ ಘಟನೆ ಅವನ ಕಿವಿಯಲ್ಲಿ ಗುಂಗಿ ಹುಳದಂತೆ ಗುಂಯ್‌ಗುಡುತ್ತ ಕಾಡುತ್ತಿತ್ತು. ಯಾಕೆ ಇತ್ತೀಚೆಗೆ ಇಂತಹ ಘಟನೆಗಳು ತುಂಬಾ ಆಗುತ್ತಿವೆ. ಇವು ಉದ್ದೇಶಪೂರ್ವಕವಾಗಿ ಆಗುತ್ತಿವೆಯೋ, ಸೇಡಿನಿಂದ ಆಗುತ್ತಿವೆಯೋ ಅರ್ಥವಾಗುತ್ತಿಲ್ಲವಲ್ಲ. ಕೊಲೆಯಾಗುವುದಕ್ಕೆ ಆ ವಿದ್ಯಾರ್ಥಿನಿ ಮಾಡಿದ ತಪ್ಪು ಏನು..? ಜೊತೆಗೆ ಪ್ರತಿಮೆಯು ಮಾಡಿದ್ದಾದರೂ ಏನು. ದೇಶಕ್ಕಾಗಿ ಹಗಲಿರುಳು ಹೋರಾಡಿದ್ದು ತಪ್ಪೇ ಅಥವಾ ನಮ್ಮನ್ನು ರಕ್ಷಿಸಲು ತಮ್ಮ ಕೈಯನ್ನು ಕಳೆದುಕೊಂಡದ್ದಲ್ಲದೆ ಯುದ್ಧಭೂಮಿಯಲ್ಲಿಯೇ ವೀರಮರಣವಪ್ಪಿದ್ದು ತಪ್ಪೇ..? ಪ್ರತಾಪ್ ಮೋಹನ್‌ರಷ್ಟೇ ಅಲ್ಲ ಇಡೀ ಪಾಟೀಲ್‌ರ ಮನೆತನವೆಂದರೆ ಮೊದಲಿನಿಂದಲೂ ಈ ದೇಶಕ್ಕಾಗಿ, ಈ ನಾಡಿಗಾಗಿ ತಮ್ಮ ಕೌಟುಂಬಿಕ ಜೀವನವನ್ನೇ ತ್ಯಾಗ ಮಾಡಿದಂತಹ ಉದಾತ್ತ ಮನೆತನ. ಅಂತಹ ಮನೆತನದ ಪ್ರತಾಪ್ ಮೋಹನ್‌ರವರ ಪ್ರತಿಮೆಯ ಈ ಪರಿಸ್ಥಿತಿಗೆ ಕಾರಣರಾರು...? ಎಂಬಂಥ ಉತ್ತರವಿಲ್ಲದ ಪ್ರಶ್ನೆಗಳಾಗಿ ಅವನನ್ನು ಕಾಡುತ್ತಿದ್ದವು. ಏನೇ ಆಗಲಿ ಇಂತಹ ಘಟನೆ ಮತ್ತೇ ಜರುಗಬಾರದು. ಪ್ರತಿಮೆಗೆ ಯಾವತ್ತೂ ಇಂತಹ ಅವಮಾನ ಆಗಬಾರದಂತೆ ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ಹೇಳಬೇಕೆಂದು ತೀರ್ಮಾನಿಸಿದನು.

ಮಾರನೆ ದಿನ ಜಗದೀಶ ಪ್ರತಿಮೆ ಬಳಸಿಕೊಂಡು ಮೈದಾನದತ್ತ ಹೋಗಬೇಕೆಂದು ಪ್ರತಿಮೆಯತ್ತ ನೋಡಿದಾಗ ಅದು ಅವನನ್ನು ತನ್ನತ್ತ ಕರೆದಂತೆ ಭಾಸವಾಯಿತು. ಸೋಮವಾರವಾದ್ದರಿಂದ ರಸ್ತೆಯ ಬದಿ ಅಲ್ಲೊಬ್ಬರು ಇಲ್ಲೊಬ್ಬರು ಎಂಬಂತೆ ನಸುಕಿನ ವಾಕಿಂಗ್‌ನಲ್ಲಿ ತೊಡಗಿದ್ದರು. ಯಾವಾಗ ಆ ಪ್ರತಿಮೆ ಅವನನ್ನು ಕರೆದಂತೆನಿಸಿತೋ ಆತ ಅದರ ಸಮೀಪ ಹೋಗಿ ಕಟಾಂಜನ ಆಚೆ ನಿಂತ. ಆತ ಅಲ್ಲಿ ನಿಂತಿದ್ದನ್ನು ನೋಡಿ,'ಅಲ್ಯಾಕ ನಿಂತಿರಿ..? ಹತ್ರ ಬರ್ರಿ...' ಎಂದು ಆರ್ದ್ರಭಾವದಿಂದ ಪ್ರತಿಮೆ ಕರೆದಂತೆನಿಸಿ ಕಟಾಂಜನ ದಾಟಿ ಕಟ್ಟೆಯ ಮುಂದೆ ಬಂದು ನಿಂತ ಜಗದೀಶ.

'ಆರಾಮ ಅದಿರಿ..?' ಮತ್ತೆ ಬಂದಿತು ಅಪರಿಚಿತ ಧ್ವನಿ. ಇದೇನೂ ಭ್ರಮೆಯೋ..ನಿಜವೋ ತಿಳಿಯದೆ ಸುತ್ತಮುತ್ತ ಕಣ್ಣಾಡಿಸಿದ. ಉಹುಂ ಯಾರೂ ಕಾಣುತ್ತಿಲ್ಲ. ಮತ್ತೇ ಯಾರೂ ನನ್ನನ್ನು ಆ ರೀತಿ ಕರೆದದ್ದು ಎಂದು ಆತನಿಗೆ ಆಶ್ಚರ್ಯವಾಯಿತು.

'ಸುತ್ತಲೂ ಏನ ನೋಡಾಕತ್ತಿರಿ..ಅದು ನಾನ... ಮಾತಾಡಿದ್ದು' ಎಂಬ ಮಾತು ಪ್ರತಿಮೆಯ ಬಾಯಿಂದ ಬರುತ್ತಿದೆ. ಆತನಿಗೆ ಆಶ್ಚರ್ಯ...!! ಅರೇ ಪ್ರತಾಪ್ ಮೋಹನ್ ಪ್ರತಿಮೆ ಮಾತನಾಡುತ್ತಿದೆ. ಆ ಧ್ವನಿಯನ್ನು ಕೇಳಿ ಆತ ಪ್ರತಿಮೆ ಹೇಗೆ ಮಾತನಾಡಿತು ಎಂದು ಸಂಶಯಗೊಂಡು ಜಗದೀಶ ಪ್ರತಿಮೆಯ ಮುಖವನ್ನೇ ನೋಡುತ್ತಾ ನಿಂತ. 'ಯಾಕ ಆಶ್ಚರ್ಯ ಆಗಾಕ ಹತ್ತೆತಿ.. ಖರೇ ನಾನ... ಪ್ರತಾಪ್ ಮೋಹನ್ ಮಾತಾಡಾಕ ಹತ್ತೇನಿ. ಯಾಕ ಇನ್ನೂ ನಂಬಿಕೆ ಬರೂವಲ್ದು...?' ಎಂಬ ಪ್ರತಿಮೆಯ ಮಾತಿಗೆ, 'ಪ್ರತಾಪ್ ಮೋಹನ್ ಸರ್. ನೀವ..ಮಾತಾಡಾಕ ಹತ್ತಿರಿ. ನಂಗ ನಂಬಲಿಕ್ಕ ಆಗವಲ್ದ. ಏನ ಸರ್ ಇದು. ಎಂಥಾ ಅದ್ಭುತ...?'

'ಯಾವ ಅದ್ಭುತಾನೂ ಇಲ್ಲ... ಆಶ್ಚರ್ಯಾನೂ ಇಲ್ಲ ಸ್ವತಃ ನಾನ ಮಾತಾಡತಿದ್ದೀನಿ ಜಗದೀಶರವರೆ', 'ಸರ್', ನನ್ನ ಹೆಸರೂ ಗೊತ್ತೈತಿ ನಿಮಗ..? ನನಗ ನೀವ... ಮಾತಾಡ್ತಾ ಇದ್ದಿರಂತ ವಿಶ್ವಾಸ ಬರವಲ್ದ...'

'ನಾನ... ಮಾತಾಡ್ತಾ ಇರೋದು... ಹೌದ. ನೀವ ಕೇಳ್ತಿರೂದು ಹೌದು. ನೀವು ಯಾರಿಗೆ ಗೊತ್ತಿಲ್ಲ. ಕನ್ನಡದ ಹೆಸರಾಂತ ಬರಹಗಾರರು. ನಿಮ್ಮ ಸಾಹಿತ್ಯದಿಂದ ನಮ್ಮ ನಾಡಿಗೆ ದೇಶದ ಎಷ್ಟ ಪ್ರಶಸ್ತಿಗಳನ್ನ ತಂದ ಕೊಟ್ಟರಿ ನೀವು. ಅಂದಾಗ ನೀವ ಗೊತ್ತಿಲ್ಲದ ಇರಾಕ ಆಗತೈತಿ...? ಭಾಳ ದಿನಗಳಿಂದ ನಾನು ಯಾರ ಜೊತೆಗಾದ್ರೂ ಮಾತನಾಡಬೇಕಂತ ಪ್ರಯತ್ನ ಮಾಡಾಕ ಹತ್ತೇನಿ. ಆದ್ರ ಆಗವಲ್ದ. ನನ್ನ ನೋಡ್ತಾರ... ಹೋಗ್ತಾರ. ನನ್ನ ಮಾತ